# ಸಶಸ್ತ್ರ ಬಲಗಳ (ವಿಶೇಷ ಅಧಿಕಾರಗಳ) ಅಧಿನಿಯಮ, 1958

**04.05.2006ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 33ನೇ ಸಂಪುಟದ 1ನೇ ಸಂಚಿಕೆಯಲ್ಲಿ 70 ಮತ್ತು 71ನೇ ಪುಟಗಳಲ್ಲಿ ಪ್ರಕಟವಾಗಿದೆ.**

## ವಿಷಯಾನುಕ್ರಮಣಿಕೆ

**ಪ್ರಕರಣಗಳು**

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ಪರಿಭಾಷೆಗಳು
3. ಗಲಭೆ ಪೀಡಿತ ಪ್ರದೇಶಗಳೆಂದು ಘೋಷಿಸುವ ಅಧಿಕಾರ
4. ಸಶಸ್ತ್ರ ಬಲಗಳ ವಿಶೇಷ ಅಧಿಕಾರಗಳು
5. ದಸ್ತಗಿರಿ ಮಾಡಲಾದ ವ್ಯಕ್ತಿಗಳನ್ನು ಪೊಲೀಸರಿಗೆ ಒಪ್ಪಿಸುವುದು
6. ಅಧಿನಿಯಮದ ಮೇರೆಗೆ ಕಾರ್ಯ ನಿರ್ವಹಿಸುವ ವ್ಯಕ್ತಿಗಳಿಗೆ ರಕ್ಷಣೆ

# ಸಶಸ್ತ್ರ ಬಲಗಳ (ವಿಶೇಷ ಅಧಿಕಾರಗಳ) ಅಧಿನಿಯಮ, 1958

[1958ರ ಅಧಿನಿಯಮ ಸಂಖ್ಯೆ 28]

[11ನೇ ಸೆಪ್ಟೆಂಬರ್, 1958]

ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್ ಮತ್ತು ತ್ರಿಪುರಾ ರಾಜ್ಯಗಳ ಗಲಭೆಪೀಡಿತ ಪ್ರದೇಶಗಳಲ್ಲಿ ಸಶಸ್ತ್ರ ಬಲಗಳ ಸದಸ್ಯರಿಗೆ ಕೆಲವು ವಿಶೇಷ ಅಧಿಕಾರಗಳನ್ನು ಪ್ರದಾನ ಮಾಡಲು ಸಮರ್ಥಗೊಳಿಸುವ ಒಂದು ಅಧಿನಿಯಮ.

ಭಾರತ ಗಣರಾಜ್ಯದ ಒಂಬತ್ತನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.**– (1) ಈ ಅಧಿನಿಯಮವನ್ನು ಸಶಸ್ತ್ರ ಬಲಗಳ (ವಿಶೇಷ ಅಧಿಕಾರಗಳ) ಅಧಿನಿಯಮ, 1958 ಎಂದು ಕರೆಯತಕ್ಕದ್ದು.

(2) ಇದು ಸಂಪೂರ್ಣವಾಗಿ ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್ ಮತ್ತು ತ್ರಿಪುರ ರಾಜ್ಯಗಳಿಗೆ ವ್ಯಾಪ್ತವಾಗತಕ್ಕದ್ದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಶಸ್ತ್ರ ಬಲಗಳು" ಎಂದರೆ ಭೂ ಬಲಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಸೈನಿಕ ಬಲಗಳು ಮತ್ತು ವಾಯು ಬಲಗಳು, ಹಾಗೂ ಇದರಲ್ಲಿ ಹಾಗೆ ಕಾರ್ಯ ನಿರ್ವಹಿಸುತ್ತಿರುವ ಒಕ್ಕೂಟದ ಯಾವುದೇ ಇತರ ಸಶಸ್ತ್ರ ಬಲಗಳು ಸೇರುತ್ತವೆ;

(ಬಿ) "ಗಲಭೆಪೀಡಿತ ಪ್ರದೇಶ" ಎಂದರೆ 3ನೇ ಪ್ರಕರಣದ ಮೇರೆಗೆ ಅಧಿಸೂಚನೆಯ ಮೂಲಕ ಗಲಭೆಪೀಡಿತ ಪ್ರದೇಶವೆಂದು ಘೋಷಿಸಲಾದ ಪ್ರದೇಶ;

(ಸಿ) ಇದರಲ್ಲಿ ಬಳಸಲಾಗಿರುವ ಆದರೆ ಪರಿಭಾಷಿಸಿರದ ಇತರ ಎಲ್ಲಾ ಪದಗಳಿಗೆ ಮತ್ತು ಪದಾವಳಿಗೆ ವಾಯುಬಲ ಅಧಿನಿಯಮ, 1950 (1950ರ 45) ಅಥವಾ ಸೇನಾ ಅಧಿನಿಯಮ, 1950 (1950ರ 46)ರಲ್ಲಿ ಪರಿಭಾಷಿಸಿ ಅನುಕ್ರಮವಾಗಿ ಕೊಟ್ಟಿರುವಂಥ ಅರ್ಥಗಳೇ ಇರತಕ್ಕದ್ದು.

**3. ಗಲಭೆಪೀಡಿತ ಪ್ರದೇಶಗಳೆಂದು ಘೋಷಿಸುವ ಅಧಿಕಾರ.**– ಈ ಅಧಿನಿಯಮವು ಅನ್ವಯಿಸುವಂಥ ಯಾವುದೇ ರಾಜ್ಯದ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ ಆ ರಾಜ್ಯದ ರಾಜ್ಯಪಾಲನು ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದ ಆಡಳಿತಗಾರನು ಅಥವಾ ಕೇಂದ್ರ ಸರ್ಕಾರವು ಸಂದರ್ಭಾನುಸಾರ ಅಂಥ ರಾಜ್ಯದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಪೂರ್ಣ ಅಥವಾ ಅದರ ಯಾವುದೇ ಭಾಗವು, ಸಿವಿಲ್ ಅಧಿಕಾರದ ನೆರವಿಗೆ ಸಶಸ್ತ್ರ ಬಲಗಳ ಉಪಯೋಗವು ಅವಶ್ಯವಾಗಿರುವಂಥ ಗಲಭೆಯ ಅಥವಾ ಅಪಾಯಕಾರಿ ಪರಿಸ್ಥಿತಿಯಲ್ಲಿದೆಯೆಂದು ಅಭಿಪ್ರಾಯಪಟ್ಟರೆ, ಆ ರಾಜ್ಯದ ರಾಜ್ಯಪಾಲ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರನು ಅಥವಾ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ಇಡೀ ರಾಜ್ಯವನ್ನು ಅಥವಾ ಒಕ್ಕೂಟ ರಾಜ್ಯಕ್ಷೇತ್ರವನ್ನು ಅಥವಾ ಅದರ ಯಾವುದೇ ಭಾಗವನ್ನು ಗಲಭೆಪೀಡಿತ ಪ್ರದೇಶವೆಂದು ಘೋಷಿಸಬಹುದು.

**4. ಸಶಸ್ತ್ರ ಬಲಗಳ ವಿಶೇಷ ಅಧಿಕಾರಗಳು.**– ಸಶಸ್ತ್ರ ಬಲಗಳಲ್ಲಿಯ ಯಾರೇ ಕಮೀಷನ್ಡ್ ಆಫೀಸರ್, ವಾರಂಟ್ ಆಫೀಸರ್, ನಾನ್–ಕಮೀಷನ್ಡ್ ಆಫೀಸರ್ ಅಥವಾ ತತ್ಸಮಾನ ದರ್ಜೆಯ ಯಾರೇ ಇತರ ವ್ಯಕ್ತಿಯು ಗಲಭೆಪೀಡಿತ ಪ್ರದೇಶದಲ್ಲಿ,–

(ಎ) ಐವರು ಅಥವಾ ಹೆಚ್ಚು ಮಂದಿ ಒಂದೆಡೆ ಸೇರುವುದನ್ನು ಅಥವಾ ಆಯುಧಗಳನ್ನು ಅಥವಾ ಆಯುಧಗಳಂತೆ ಉಪಯೋಗಿಸಲು ಸಾಧ್ಯವಾಗುವ ವಸ್ತುಗಳನ್ನು ಅಥವಾ ಅಗ್ನ್ಯಸ್ತ್ರಗಳು, ಮದ್ದುಗುಂಡುಗಳು ಅಥವಾ ಸ್ಫೋಟಕ ವಸ್ತುಗಳನ್ನು ಒಯ್ಯುವುದನ್ನು ನಿಷೇಧಿಸಿರುವ ಆ ಗಲಭೆಪೀಡಿತ ಪ್ರದೇಶದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು ಅಥವಾ ಆದೇಶವನ್ನು ಉಲ್ಲಂಘಿಸಿ ಯಾರೇ ವ್ಯಕ್ತಿಯು ದುಷ್ಕೃತ್ಯದಲ್ಲಿ ತೊಡಗಿರುವಾಗ ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡಲು ಅವಶ್ಯವೆಂದು ತಾನು ಪರಿಗಣಿಸುವಂಥ ಯುಕ್ತ ಎಚ್ಚರಿಕೆಯನ್ನು ನೀಡಿದ ತರುವಾಯ, ಅಂಥ ವ್ಯಕ್ತಿಯ ಸಾವು ಸಂಭವಿಸಿದರೂ ಸರಿಯೇ ಆ ವ್ಯಕ್ತಿಯ ಮೇಲೆ ಗುಂಡನ್ನು ಹಾರಿಸಬಹುದು ಅಥವಾ ಇತರ ರೀತಿಯಲ್ಲಿ ಬಲವನ್ನು ಪ್ರಯೋಗಿಸಬಹುದು ಎಂದು ಅಭಿಪ್ರಾಯಪಟ್ಟರೆ, ಅವನು ಹಾಗೆ ಮಾಡಬಹುದು.

(ಬಿ) ಶೇಖರಿಸಿಟ್ಟಿರುವ ಆಯುಧಗಳನ್ನು ಸಶಸ್ತ್ರ ದಾಳಿ ಮಾಡುವ ಅಥವಾ ಮಾಡುವ ಸಂಭವವಿರುವ ಅಥವಾ ಮಾಡಲು ಪ್ರಯತ್ನಿಸುವ ಸಲುವಾಗಿ ಸಿದ್ಧಪಡಿಸಿರುವ ಅಥವಾ ಭದ್ರ ನೆಲೆಯನ್ನು ಅಥವಾ ಆಶ್ರಯದಾಣವನ್ನು ಅಥವಾ ಸಶಸ್ತ್ರ ಸ್ವಯಂಸೇವಕರ ತರಬೇತಿ ಶಿಬಿರದಂತೆ ಉಪಯೋಗಿಸಲಾದ ಅಥವಾ ಸಶಸ್ತ್ರ ಗ್ಯಾಂಗ್‌ನವರು ಅಥವಾ ಯಾವುದೇ ಅಪರಾಧದ ಸಂಬಂಧ ಬೇಕಾಗಿದ್ದು ತಲೆಮರೆಸಿಕೊಂಡಿರುವವರು ಅಡಗುದಾಣಗಳಾಗಿ ಬಳಸಲಾದ ಯಾವುದೇ ರಚನೆಯನ್ನು ನಾಶಪಡಿಸುವುದು ಅಗತ್ಯವೆಂದು ಅಭಿಪ್ರಾಯಪಟ್ಟರೆ, ಹಾಗೆ ಮಾಡಬಹುದು.

(ಸಿ) ಒಂದು ಸಂಜ್ಞೇಯ ಅಪರಾಧ ಮಾಡಿರುವ ಅಥವಾ ಸಂಜ್ಞೇಯ ಅಪರಾಧವನ್ನು ಮಾಡಿರುವನೆಂದು ಅಥವಾ ಮಾಡಬಹುದೆಂದು ಯುಕ್ತ ಸಂಶಯವಿರುವಂಥ ಯಾರೇ ವ್ಯಕ್ತಿಯನ್ನು ಯಾವುದೇ ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು ಮತ್ತು ಅಂಥ ದಸ್ತಗಿರಿಗೆ ಅವಶ್ಯವಿರಬಹುದಾದಂಥ ಬಲವನ್ನು ಪ್ರಯೋಗಿಸಬಹುದು.

(ಡಿ) ಮೇಲೆ ಹೇಳಿದಂಥ ಯಾವುದೇ ದಸ್ತಗಿರಿಗಾಗಿ ಅಥವಾ ಅಕ್ರಮವಾಗಿ ತಡೆಹಿಡಿಯಲಾಗಿದೆಯೆಂದು ಅಥವಾ ಬಂಧಿಸಿಡಲಾಗಿದೆಯೆಂದು ನಂಬಲಾಗುವ ಯಾರೇ ವ್ಯಕ್ತಿಯನ್ನು ಅಥವಾ ಕಳುವಾದ ಸ್ವತ್ತು ಎಂದು ಯುಕ್ತವಾಗಿ ಶಂಕಿಸಲಾದ ಯಾವುದೇ ಸ್ವತ್ತನ್ನು ಅಥವಾ ಅಂಥ ಆವರಣಗಳಲ್ಲಿ ಕಾನೂನುಬಾಹಿರವಾಗಿ ಇಡಲಾಗಿದೆಯೆಂದು ನಂಬಲಾದ ಯಾವುವೇ ಆಯುಧಗಳು, ಮದ್ದುಗುಂಡುಗಳು, ಸ್ಫೋಟಕ ವಸ್ತುಗಳನ್ನು ವಶಕ್ಕೆ ತೆಗೆದುಕೊಳ್ಳಲು ಯಾವುದೇ ಆವರಣಗಳನ್ನು ವಾರಂಟಿಲ್ಲದೆ ಪ್ರವೇಶಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದ ಬಲವನ್ನು ಪ್ರಯೋಗಿಸಬಹುದು.

**5. ದಸ್ತಗಿರಿ ಮಾಡಲಾದ ವ್ಯಕ್ತಿಗಳನ್ನು ಪೊಲೀಸರಿಗೆ ಒಪ್ಪಿಸುವುದು.–** ಈ ಅಧಿನಿಯಮದ ಮೇರೆಗೆ ದಸ್ತಗಿರಿ ಮಾಡಲಾದ ಮತ್ತು ಅಭಿರಕ್ಷೆಗೆ ತೆಗೆದುಕೊಳ್ಳಲಾದ ಯಾರೇ ವ್ಯಕ್ತಿಯನ್ನು ವಿಳಂಬ ಮಾಡದೇ ಹಾಗೆ ದಸ್ತಗಿರಿ ಮಾಡಲು ಕಾರಣವಾದ ಪರಿಸ್ಥಿತಿಗಳ ಬಗೆಗಿನ ವರದಿಯೊಂದಿಗೆ ಅತ್ಯಂತ ಸಮೀಪದ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಗೆ ಒಪ್ಪಿಸತಕ್ಕದ್ದು.

**6. ಅಧಿನಿಯಮದ ಮೇರೆಗೆ ಕಾರ್ಯ ನಿರ್ವಹಿಸುವ ವ್ಯಕ್ತಿಗಳಿಗೆ ರಕ್ಷಣೆ.–** ಈ ಅಧಿನಿಯಮದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ಕೈಗೊಂಡ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸಲಾದ ಯಾವುದೇ ಕಾರ್ಯದ ಸಂಬಂಧದಲ್ಲಿ, ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ಪ್ರಾಸಿಕ್ಯೂಷನ್, ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿ ಪಡೆದ ಹೊರತು ಹೂಡತಕ್ಕದ್ದಲ್ಲ.

* * * *